# ಸೇತುಬಂಧ 2023-24

# ಪರಿಸರ ಅಧ್ಯಯನ

## 4ನೇ ತರಗತಿ

# ಸುಗಮಕಾರರ ಕೈಪಿಡಿ

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ತುಮಕೂರು
ರಾಜ್ಯಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬೆಂಗಳೂರು
ಹಾಗೂ
ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು

| | |
|---|---|
| **ಪರಿಕಲ್ಪನೆ ಮತ್ತು ಮಾರ್ಗದರ್ಶನ** | |
| ಶ್ರೀ ರಿತೇಶ್ ಕುಮಾರ್ ಸಿಂಗ್ ಭಾ.ಆ.ಸೇ<br>ಪ್ರಧಾನ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ<br>ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ.<br>ಬೆಂಗಳೂರು | ಡಾ. ವಿಶಾಲ್.ಆರ್ ಭಾ.ಆ.ಸೇ<br>ಆಯುಕ್ತರು ,<br>ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ<br>ಬೆಂಗಳೂರು |
| ಶ್ರೀಮತಿ. ಬಿ.ಬಿ.ಕಾವೇರಿ. ಭಾ. ಆ. ಸೇ.<br>ರಾಜ್ಯ ಯೋಜನಾ ನಿರ್ದೇಶಕರು,<br>ಸಮಗ್ರ ಶಿಕ್ಷಣ ಕರ್ನಾಟಕ,<br>ಬೆಂಗಳೂರು | ಶ್ರೀಮತಿ ವಿ.ಸುಮಂಗಲ.<br>ನಿರ್ದೇಶಕರು,<br>ಡಿ.ಎಸ್.ಇ.ಆರ್.ಟಿ.<br>ಬೆಂಗಳೂರು. |
| **ಸಲಹೆ ಮತ್ತು ಮಾರ್ಗದರ್ಶನ** | |
| ಶ್ರೀ ಮಂಜುನಾಥ ಕೆ.<br>ಪ್ರಾಚಾರ್ಯರು ಹಾಗೂ ಉಪನಿರ್ದೇಶಕರು (ಅಭಿವೃದ್ಧಿ)<br>ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ<br>ತುಮಕೂರು. | ಶ್ರೀಮತಿ ಪದ್ಮಜ ಬಿ.ಎನ್<br>ನೋಡಲ್ ಅಧಿಕಾರಿಗಳು ಹಾಗೂ<br>ಹಿರಿಯ ಉಪನ್ಯಾಸಕರು, ಡಯಟ್ ತುಮಕೂರು |
| **ಸಾಹಿತ್ಯ ರಚನಾ ತಂಡ** | |
| ಶ್ರೀಮತಿ ತುಂಗ ಆರ್.ವಿ<br>CRP ಬೆಳಧರ, BRC ಕಛೇರಿ ತುಮಕೂರು | ಶ್ರೀಮತಿ ಅಶ್ವಿನಿ<br>CRP ಹೊಳಕಲ್ಲು, BRC ಕಛೇರಿ ತುಮಕೂರು |
| **ಮಾರ್ಗದರ್ಶನ** | |
| ಶ್ರೀ ಶ್ರೀನಿವಾಸರೆಡ್ಡಿ<br>ಉಪನ್ಯಾಸಕರು, ಡಯಟ್ ತುಮಕೂರು | |
| ಶ್ರೀ ಮಲ್ಲಿಕಾರ್ಜುನ ಆರಾಧ್ಯ<br>ಉಪನ್ಯಾಸಕರು, ಡಯಟ್ ತುಮಕೂರು | ಶ್ರೀಮತಿ ಶ್ರೀದೇವಿ ಎನ್<br>ಉಪನ್ಯಾಸಕರು, ಡಯಟ್ ತುಮಕೂರು |
| **ಸಾಹಿತ್ಯ ಪರಿಷ್ಕರಣಾ ತಂಡ** | |
| ಶ್ರೀ ಗಿರೀಶ್ ಬಿ.ಎಸ್. ಸ.ಶಿ<br>ಸ.ಪ್ರೌ.ಶಾಲೆ, ವಡ್ಡಗೆರೆ, ಕೊರಟಗೆರೆ ತಾ.<br>ಮಧುಗಿರಿ ಶೈಕ್ಷಣಿಕ ಜಿಲ್ಲೆ | ಶ್ರೀ ಸುರೇಶ್ ಬಾಬು<br>CRP, ನೆಲಹಾಳ್, BRC ಕಛೇರಿ ತುಮಕೂರು |

# ಸೇತುಬಂಧ -2023-24

## ಶಿಕ್ಷಕರಿಗೆ ಸೂಚನೆಗಳು

ಸೇತುಬಂಧ ಶಿಕ್ಷಣವೆಂದರೆ **"ಒಂದು ತರಗತಿಗೆ ಪ್ರವೇಶ ಪಡೆದ ಮಗುವು ಹಿಂದಿನ ತರಗತಿಯಲ್ಲಿ ಗಳಿಸಿದ ಸಾಮರ್ಥ್ಯ, ಕಲಿಕೆಯ ಗುಣದೋಷಗಳನ್ನು ಗುರುತಿಸಿ ಮುಂದಿನ ಕಲಿಕೆಗೆ ಸಿದ್ಧಗೊಳಿಸುವ ಪ್ರಕ್ರಿಯೆ."**

ಆತ್ಮೀಯ ಶಿಕ್ಷಕ ಬಂಧುಗಳೆ, 15 ದಿನಗಳ ಸೇತುಬಂಧ ಕಾರ್ಯಕ್ರಮದ ಪೂರ್ಣ ವಿವರವನ್ನು ತಮಗೆ ನೀಡಲಾಗಿದೆ, ದಯಮಾಡಿ ಒಮ್ಮೆ ಈ ಸಾಹಿತ್ಯವನ್ನು ಪೂರ್ಣ ಓದಿಕೊಂಡು ಅರ್ಥೈಸಿಕೊಳ್ಳಲು ಕೋರುತ್ತಿದ್ದೇವೆ. ಸೇತುಬಂಧ ಕಲಿಕಾ ಪ್ರಕ್ರಿಯೆಯು ಚಟುವಟಿಕೆ ಆಧಾರಿತ, ಶಿಶು ಕೇಂದ್ರಿತ ಹಾಗೂ ಸಂತಸದಾಯಕವಾಗಿ ನಡೆಯಲಿ. ಈ ಸಾಹಿತ್ಯದಲ್ಲಿರುವ ಚಟುವಟಿಕೆಗಳು ಕೇವಲ ಮಾದರಿಯಾಗಿರಲೆಂದು ನೀಡಲಾಗಿದೆ . ಸ್ಥಳೀಯ ಸನ್ನಿವೇಶ ಮತ್ತು ಅಗತ್ಯತೆಗಳನ್ನು ಅರಿತು, ಸೃಜನಾತ್ಮಕವಾಗಿ ಚಟುವಟಿಕೆಗಳನ್ನು ತಾವು ರೂಪಿಸಿಕೊಳ್ಳಲು ಸ್ವತಂತ್ರರು, ಅದಕ್ಕಾಗಿ ತಾವು ಅಗತ್ಯ ಪೂರ್ವಸಿದ್ಧತೆಯೊಂದಿಗೆ ಚಟುವಟಿಕೆಗಳನ್ನು ಆಯೋಜಿಸಬೇಕಿದೆ. ಅಲ್ಲದೆ ಇಲ್ಲಿನ ಚಟುವಟಿಕೆಗಳನ್ನು ಕೇವಲ ಆಯೋಜಿಸುವ ಚಟುವಟಿಕೆಗಳಾಗಿ ನೋಡದೆ, ಕಲಿಕೆಯನ್ನು ಖಾತ್ರಿಪಡಿಸಿಕೊಳ್ಳುವ ಸಾಧನಗಳನ್ನಾಗಿ ಬಳಸಿಕೊಳ್ಳಬೇಕಿದೆ. ಈ ಚಟುವಟಿಕೆಗಳನ್ನು ಮಾಡುವ ಸಂದರ್ಭದಲ್ಲಿ ಕೇವಲ ಕೆಲವು ವಿದ್ಯಾರ್ಥಿಗಳನ್ನಷ್ಟೆ ಗಮನದಲ್ಲಿರಿಸದೆ, ಎಲ್ಲಾ ವಿದ್ಯಾರ್ಥಿಗಳ ಕಲಿಕೆಯನ್ನು ಗಮನಿಸಿ ಅನುಕೂಲಿಸಬೇಕಿದೆ. ಇದಕ್ಕೆ ಸಹಾಯಕವಾಗಲೆಂದು ಪ್ರತಿ ಕಲಿಕಾಫಲಕ್ಕೆ ಹೆಚ್ಚಿನ ಚಟುವಟಿಕೆಗಳನ್ನು ಇಲ್ಲಿ ನೀಡಲಾಗಿದೆ. ಪ್ರಸ್ತುತ ಈ ಸಾಹಿತ್ಯವನ್ನು ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಜ್ಞಾನ, ಪರಿಸರ ಅಧ್ಯಯನ ವಿಷಯದ ದೃಷ್ಟಿಕೋನಕ್ಕೆ ಪೂರಕವಾದ ಹಾಗೂ ಪ್ರಸಕ್ತ ವರ್ಷದ ಕಲಿಕಾ ಫಲಗಳಿಗೆ ನೆರವಾಗುವ ಹಿಂದಿನ ತರಗತಿಯ ಕಲಿಕಾಂಶಗಳನ್ನು ಗಮನದಲ್ಲಿಟ್ಟುಕೊಂಡು ಹತ್ತು ಕಲಿಕಾಫಲಗಳನ್ನು ಸೇತುಬಂಧ ಕಾರ್ಯಕ್ರಮಕ್ಕೆ ನೀಡಲಾಗಿದೆ. ಅದಕ್ಕಾಗಿ ನೀವುಗಳು,

- ➢ ಪೂರ್ವ ಪರೀಕ್ಷೆಯ ನಂತರ **ಎಫ್.ಎಲ್.ಎನ್** ಕಲಿಕೆಯ ಕೊರತೆ ಇರುವ ವಿದ್ಯಾರ್ಥಿಗಳಿಗೆ ಶಾಲೆಯಲ್ಲಿ ಲಭ್ಯವಿರುವ ಪರಿಸರ ಅಧ್ಯಯನದ ಕಲಿಕಾ ಸಾಮಗ್ರಿಗಳನ್ನು ಬಳಸಿಕೊಂಡು ಎಫ್.ಎಲ್.ಎನ್ ಅನ್ನು ಸಾಧಿಸುವುದು.
- ➢ ಎಫ್.ಎಲ್.ಎನ್ ಸಾಧನೆಗೆ **15** ದಿನಗಳ ಪೂರ್ಣ ಸಮಯ ಬೇಕಾದಲ್ಲಿ ಉಳಿದ ಕಲಿಕಾಫಲಗಳನ್ನು ಸೇತುಬಂಧದ ನಂತರ ಪಾಠ ಬೋಧನೆಯ ಸಂದರ್ಭದಲ್ಲಿ ಎಫ್.ಎಲ್.ಎನ್ ವಿದ್ಯಾರ್ಥಿಗಳಿಗೆ ಹೆಚ್ಚಿನ ಗಮನ ನೀಡಿ ಕಲಿಯಬೇಕಾದ ಕಲಿಕಾ ಫಲಗಳಿಗೆ ಬ್ರಿಡ್ಜ್ ಮಾಡುವುದು.
- ➢ ಪೂರ್ವ ಪರೀಕ್ಷೆಯ ನಂತರ ಸೇತುಬಂಧ ನಡೆಸಲು ಎಫ್.ಎಲ್.ಎನ್ ವಿದ್ಯಾರ್ಥಿಗಳು ಮತ್ತು ಇತರೆ ವಿದ್ಯಾರ್ಥಿಗಳ ಹಿನ್ನಲೆ ಮತ್ತು ಕಲಿಕಾ ಮಟ್ಟ ಅರಿತು ವಿದ್ಯಾರ್ಥಿವಾರು ಸೂಕ್ತ ಚಟುವಟಿಕೆಗಳನ್ನು ಗುರುತಿಸಿಕೊಂಡು ಸಂತಸದಾಯಕ ಕಲಿಕೆಗೆ ಒತ್ತು ನೀಡುವುದು.
- ➢ ಸಾಫಲ್ಯ ಪರೀಕ್ಷೆ ನಡೆಸಿದ ನಂತರ **SAP** ನ **ನಮೂನೆ 5** ರಲ್ಲಿ ಕ್ರಿಯಾ ಯೋಜನೆ ರೂಪಿಸುವುದು.

- ಸಾಫಲ್ಯ ಪರೀಕ್ಷೆಯ ನಂತರವೂ ಎಫ್.ಎಲ್.ಎನ್ ಕೊರತೆ ಇರುವ ಮಕ್ಕಳು ಎಫ್.ಎಲ್.ಎನ್ ಸಾಧಿಸಲು ವಿದ್ಯಾರ್ಥಿವಾರು ಕ್ರಿಯಾ ಯೋಜನೆ ರೂಪಿಸಿಕೊಂಡು ಅನುಷ್ಠಾನಿಸುವುದು.
- ಸಾಫಲ್ಯ ಪರೀಕ್ಷೆಯ ನಂತರ ಪರಿಸರ ಅಧ್ಯಯನ ವಿಷಯದ ದೃಷ್ಟಿಕೋನ - ವೈಜ್ಞಾನಿಕ ಮನೋಭಾವ,ತಾರ್ಕಿಕ ಚಿಂತನೆ, ಪ್ರಾಯೋಗಿಕ ಅನ್ವಯಿಕ ಜ್ಞಾನ ವೃದ್ಧಿಗೆ ಹಾಗೂ ಹಿಂದಿನ ತರಗತಿಗಳಲ್ಲಿ ಅಗತ್ಯ ಕಲಿಕಾಂಶಗಳ ಕಲಿಕೆಯ ಕೊರತೆ ಇರುವ ಮಕ್ಕಳಿಗೆ ಈ ಸಾಲಿನ ಪಾಠ ಬೋಧನೆಯ ಪ್ರಾರಂಭದಲ್ಲಿ ಮೇಲಿನ ಅಂಶಗಳಿಗೆ ಒತ್ತು ನೀಡಿ ಪೂರಕ ಚಟುವಟಿಕೆ ನಡೆಸಿ ಕಲಿಕೆಗೆ ಬ್ರಿಡ್ಜ್ ಮಾಡುವುದು.

ಎಫ್.ಎಲ್.ಎನ್ ಅನ್ನು, ಪರಿಸರ ಅಧ್ಯಯನ ವಿಷಯದ ದೃಷ್ಟಿಕೋನದ ಪರಿಕಲ್ಪನೆಗಳನ್ನು ಹಾಗೂ ಈ ಸಾಲಿನ ಕಲಿಕಾ ಫಲಗಳಿಗೆ ಪೂರಕವಾಗಿ ಅಗತ್ಯವೆನ್ನಿಸುವ ಹಿಂದಿನ ಸಾಲಿನ ಕಲಿಕಾಂಶಗಳನ್ನು, ಶಾಲಾ ಪ್ರಾರಂಭದಲ್ಲೆ ಚಟುವಟಿಕೆ ಆಧಾರಿತವಾಗಿ, ವಿದ್ಯಾರ್ಥಿ ಕೇಂದ್ರಿತವಾಗಿ ಹಾಗೂ ಸಂತಸದಾಯಕವಾಗಿ ಕಲಿಸಿ ಈ ವರ್ಷದ ತರಗತಿಗೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುವುದೇ ಈ ಕಾರ್ಯಕ್ರಮದ ಮಹದಾಶಯವಾಗಿರುತ್ತದೆ. ಈ ಎಲ್ಲಾ ಆಶಯಗಳು ಸಾಕಾರಗೊಳ್ಳಲು ತಾವುಗಳು ಸಂಬಂಧಿಸಿದ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಆಯೋಜಿಸಿ ಗುಣಾತ್ಮಕ ಕಲಿಕೆಗೆ ಭದ್ರ ಬುನಾದಿ ಹಾಕುವಿರೆಂದು ಆಶಿಸುತ್ತೇವೆ ಮತ್ತು ಈ ಸಾಹಿತ್ಯವನ್ನು ತಮ್ಮ ಮೂಲಕ ಮಕ್ಕಳಿಗೆ ಅರ್ಪಿಸುತ್ತೇವೆ. ಶುಭವಾಗಲಿ.

# ಅಪೇಕ್ಷಿತ ಕಲಿಕಾ ಫಲಗಳ ಪಟ್ಟಿ

1.ಕುಟುಂಬದ ಅಗತ್ಯತೆ, ಸಂಬಂಧಗಳು, ಮೌಲ್ಯಗಳು ಮತ್ತು ವೈವಿಧ್ಯತೆಯನ್ನು ಅರಿಯುವರು.

2.ಒಳಾಂಗಣ ಹಾಗೂ ಹೊರಾಂಗಣ ಆಟಗಳನ್ನು ಗುರುತಿಸುವರು ಮತ್ತು ಆಟಗಳನ್ನು ಕಲಿತು ಅವುಗಳ ಪ್ರಯೋಜನಗಳನ್ನು ತಿಳಿಯುವರು.

3.ಸಸ್ಯಗಳ ಭಾಗಗಳು ಮತ್ತು ವಿಧಗಳನ್ನು ಗುರುತಿಸುವರು ಹಾಗೂ ಸಸ್ಯಗಳ ಮೇಲಿನ ನಮ್ಮ ಅವಲಂಬನೆಯನ್ನು ವಿವರಿಸುವರು.

4.ವಿವಿಧ ಪ್ರಾಣಿಗಳನ್ನು ಮತ್ತು ಪಕ್ಷಿಗಳನ್ನು ಗುರುತಿಸಿ, ಪ್ರಾಣಿಗಳನ್ನು ವಾಸಸ್ಥಳದ ಆಧಾರದ ಮೇಲೆ ಹಾಗೂ ಪಕ್ಷಿಗಳನ್ನು ಅವು ಸೇವಿಸುವ ಆಹಾರಕ್ಕನುಗುಣವಾಗಿ ಗುಂಪು ಮಾಡುವರು.

5.ದಿಕ್ಕುಗಳು ಮತ್ತು ದಿಕ್ಕುಗಳಿಗನುಗುಣವಾಗಿ ಸ್ಥಳಗಳನ್ನು ಗುರುತಿಸುವರು.

6.ವಿವಿಧ ಆಕಾಶ ಕಾಯಗಳನ್ನು ಗುರುತಿಸುವರು ಹಾಗೂ ಭೂಮಿಯ ಲಕ್ಷಣಗಳ ಬಗ್ಗೆ ಅರಿಯುವರು.

7. ನೀರಿನ ಮೂಲಗಳು, ಉಪಯೋಗಗಳು ಹಾಗೂ ನೀರಿನ ಸಂರಕ್ಷಣೆಯ ಕ್ರಮಗಳ ಬಗ್ಗೆ ತಿಳಿಯುವರು.

8. ಸಸ್ಯಮೂಲ ಮತ್ತು ಪ್ರಾಣಿಮೂಲ ಆಹಾರ ಪದಾರ್ಥಗಳನ್ನು ಗುರುತಿಸುವರು ಹಾಗೂ ಆಹಾರ ತಯಾರಿಕೆಗೆ ಬೇಕಾಗುವ ಪದಾರ್ಥಗಳನ್ನು ತಿಳಿಯುವರು ಮತ್ತು ವಿವಿಧ ಪ್ರಾಣಿಪಕ್ಷಿಗಳ ಆಹಾರವನ್ನು ತಿಳಿಯುವರು.

9. ಮಾನವನ ಮೂಲಭೂತ ಅಗತ್ಯತೆಗಳ ಅವಶ್ಯಕತೆ ಹಾಗೂ ಕಾಲಕ್ಕನುಗುಣವಾಗಿ ಅವುಗಳಲ್ಲಾದ ಬದಲಾವಣೆಗಳನ್ನು ವಿವರಿಸುವರು.

10.ವಿವಿಧ ಸಾರಿಗೆ ವಾಹನಗಳನ್ನು ಗುರುತಿಸಿ ಗುಂಪು ಮಾಡುವರು ಹಾಗೂ ಸಂಪರ್ಕ ಸಾಧನಗಳ ಅಗತ್ಯತೆ ಮತ್ತು ಕಾಲಕ್ಕನುಗುಣವಾಗಿ ಅವುಗಳಲ್ಲಾದ ಬದಲಾವಣೆಗಳನ್ನು ಅರಿಯುವರು.

11. ವೈಯಕ್ತಿಕ ಹಾಗೂ ಪರಿಸರ ಸ್ವಚ್ಛತೆ ಬಗ್ಗೆ ಜಾಗೃತಿ ಹೊಂದುವರು ಹಾಗೂ ಕಸದ ಪುನರ್ಬಳಕೆಯ ಬಗ್ಗೆ ತಿಳಿಯುವರು

# 2023-24 ನೇ ಸಾಲಿನ ಸೇತುಬಂಧ

ತರಗತಿ : 4 | 15 ದಿನಗಳ ಕಲಿವಿನ ಚಟುವಟಿಕೆಗಳು | ವಿಷಯ : ಪರಿಸರ ಅಧ್ಯಯನ

| ಕ್ರ ಸ | ಅಪೇಕ್ಷಿತ ಕಲಿಕಾ ಫಲಗಳು | ಕಲಿಕಾಂಶಗಳು | ಸಲಹಾತ್ಮಕ ಚಟುವಟಿಕೆಗಳು | ಚಟುವಟಿಕೆಗಳ ನಿರ್ವಹಣೆಗಾಗಿ ಸೂಚನೆಗಳು |
|---|---|---|---|---|
| 1 | ಕುಟುಂಬದ ಅಗತ್ಯತೆ, ಸಂಬಂಧಗಳು, ಮೌಲ್ಯಗಳು ಮತ್ತು ವೈವಿಧ್ಯತೆಯನ್ನು ಅರಿಯುವರು. | ಅ)ಮನೆಯೊಳಗಿನ ರಕ್ತ ಸಂಬಂಧಿಗಳ ಸಮೂಹವೇ ಕುಟುಂಬ. | 'ನನ್ನ ಪ್ರೀತಿಯ ಕುಟುಂಬ' (ಕುಟುಂಬದ ಭಾವಚಿತ್ರ ಪ್ರದರ್ಶನ) | → ಮಕ್ಕಳು ತಮ್ಮ ಕುಟುಂಬದ ಭಾವಚಿತ್ರದಲ್ಲಿರುವ ವ್ಯಕ್ತಿಗಳ ಸಂಬಂಧಗಳನ್ನು ತರಗತಿಯಲ್ಲಿ ಹೇಳುತ್ತಾ, ಶಿಕ್ಷಕರ ಸಹಾಯದಿಂದ ಕುಟುಂಬದ ಅರ್ಥವನ್ನು ತಿಳಿಯುವರು<br>→ ನಿಮ್ಮ ಕುಟುಂಬದಲ್ಲಿ ಇರುವ ಸದಸ್ಯರ ಹೆಸರನೂಂದಿಗೆ ಸಂಬಂಧವನ್ನು ಪಟ್ಟಿ ಮಾಡಿ |
| | | | ii)ಪ್ರಶ್ನಾವಳಿ' (ಸಂಬಂಧಗಳ ಮೇಲಿನ ಪ್ರಶ್ನೆಯಿರುವ ಮಿಂಚುಪಟ್ಟಿ) | → ಮಕ್ಕಳು, ಮಿಂಚುಪಟ್ಟಿಗಳಲ್ಲಿರುವ ಸಂಬಂಧಗಳಿಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರಿಸುತ್ತಾ, ವಿವಿಧ ಸಂಬಂಧಗಳನ್ನು ಅರಿಯುವರು/ಕುಟುಂಬ ಸದಸ್ಯರ ನಡುವಿನ ಸಂಭಾಷಣೆ ಕುರಿತು ಕಿರುನಾಟಕ<br>( ಉದಾ: ನಿನ್ನ ತಂದೆಯ ತಂಗಿ ನಿನಗೆ ಏನಾಗಬೇಕು?) |
| | | ಆ) ವಿಭಕ್ತ ಮತ್ತು ಅವಿಭಕ್ತ ಕುಟುಂಬಗಳಿಗಿರುವ ವ್ಯತ್ಯಾಸ . | 'ಕುಟುಂಬದ ವಿಧಗಳು' (ಚಿತ್ರಪ್ರದರ್ಶನ) | → ಬೇರೆ ಬೇರೆ ಕುಟುಂಬಗಳ ಚಿತ್ರಗಳನ್ನುನೋಡಿ, ಅದರಲ್ಲಿರುವ ಸದಸ್ಯರ ಸಂಖ್ಯೆಗನುಗುಣವಾಗಿ ಕುಟುಂಬದ ಎರಡು ವಿಧಗಳಾದ ವಿಭಕ್ತ ಮತ್ತುಅವಿಭಕ್ತ ಕುಟುಂಬಗಳ ಬಗ್ಗೆ ಶಿಕ್ಷಕರ ಸಹಾಯದಿಂದ , ವಿಭಕ್ತ & ಅವಿಭಕ್ತ ಕುಟುಂಬಗಳ ನಡುವಿನ ವ್ಯತ್ಯಾಸ ತಿಳಿಯುವರು.<br><table><tr><td>ಕ್ರ.ಸಂ</td><td>ವಿಭಕ್ತ ಕುಟುಂಬ</td><td>ಅವಿಭಕ್ತ ಕುಟುಂಬ</td></tr><tr><td></td><td></td><td></td></tr><tr><td></td><td></td><td></td></tr></table> |
| | | | ii) 'ನನ್ನ | → ಪ್ರತೀ ಮಗುವು ತನ್ನ ಕುಟುಂಬವು ವಿಭಕ್ತವೋ ಅಥವಾ |

| | | | | |
|---|---|---|---|---|
| | | | ಕುಟುಂಬದ ವಿಧ' (ಮೌಖಿಕ ಅಭಿವ್ಯಕ್ತಿ) | ಅವಿಭಕ್ತವೋ ಎಂದು ತನ್ನ ಸ್ನೇಹಿತರು ಹಾಗೂ ಶಿಕ್ಷಕರೊಂದಿಗೆ ಹಂಚಿಕೊಳ್ಳುವುದು. |
| | | ಇ) ಕುಟುಂಬದಿಂದ ಒಳ್ಳೆಯ ಮೌಲ್ಯಗಳು. | 'ನಾನೂ ಸಹಾಯ ಮಾಡುವೆ!' (ಮೌಖಿಕ ಚಟುವಟಿಕೆ) | → ಮಗು, ತನ್ನ ಬಿಡುವಿನ ವೇಳೆಯಲ್ಲಿ ಕುಟುಂಬದ ಸದಸ್ಯರಿಗೆ ಹೇಗೆ ಸಹಕರಿಸುತ್ತದೆಎಂದು ತರಗತಿಯಲ್ಲಿ ಹೆಮ್ಮೆಯಿಂದ ಹಂಚಿಕೊಳ್ಳುತ್ತದೆ.<br>→ ಮಗುವಿನ ಈ ಕಾರ್ಯವನ್ನು ಶಿಕ್ಷಕರು ಪ್ರಶಂಸಿಸಿ ಉತ್ತೇಜಿಸುವರು. |
| | | | ಕುಟುಂಬದಿಂದ ಕಲಿಯುವ ಮೌಲ್ಯಗಳಿಗೆ ಸಂಬಂಧಿಸಿದ ನಾಟಕಾಭಿನಯ | → ಕುಟುಂಬದಿಂದ ಕಲಿಯುವ ಒಳ್ಳೆಯ ಗುಣಗಳಿಗೆ ಸಂಬಂಧಿಸಿದಂತೆ ಶಿಕ್ಷಕರು<br>ಸ್ವರಚಿತ ನಾಟಕವನ್ನು ಮಕ್ಕಳಿಂದ ಮಾಡಿಸಿ, ಆ ನಾಟಕದ ವಿವಿಧ ಸನ್ನಿವೇಶಗಳಲ್ಲಿ ಬರುವ ಮೌಲ್ಯಗಳನ್ನು ತಿಳಿದು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಲು ಉತ್ತೇಜಿಸುವುದು. |
| 2 | ಒಳಾಂಗಣ ಹಾಗೂ ಹೊರಾಂಗಣ ಆಟಗಳನ್ನು ಗುರುತಿಸುವರು ಮತ್ತು ಆಟಗಳನ್ನು ಕಲಿತು ಅವುಗಳ ಪ್ರಯೋಜನಗಳನ್ನು ತಿಳಿಯುವರು | ಅ) ಒಳಾಂಗಣ ಮತ್ತು ಹೊರಾಂಗಣ ಆಟಗಳು. | i)ಹೊಂದಿಸು' (ಗುಂಪು ಚಟುವಟಿಕೆ) | → ಅಭ್ಯಾಸ ಹಾಳೆಯಲ್ಲಿರುವ ಆಟಗಳ ಚಿತ್ರಗಳನ್ನು ಅವುಗಳ ಹೆಸರುಗಳೊಂದಿಗೆ ಹೊಂದಿಸಲು ಹುರಿದುಂಬಿಸೋಣ. |
| | | | ii) ' ಆಡು ಆಟ ಆಡು ' (ಆಟ ಆಡುವರು) | → ಒಳಾಂಗಣ ಆಟಗಳಾದ ಕೇರಂ, ಚೌಕಾಬಾರ ಹಾಗೂ ಹೊರಾಂಗಣ ಆಟಗಳಾದ ಕಬಡ್ಡಿ, ಲಗೋರಿ ಇತ್ಯಾದಿ ಆಟಗಳನ್ನು ಆಡಿ ಆನಂದಿಸುವರು. ಕೆಲವು ಒಳಾಂಗಣ ಮತ್ತು ಹೊರಾಂಗಣ ಆಟಗಳ ಪಟ್ಟಿ ಮಾಡುವರು. |
| | | ಆ) ಆಟಗಳ ಪ್ರಯೋಜನ. | i) ಆಟದಿಂದ ಆರೋಗ್ಯ ( ಚರ್ಚೆ ) | → ತರಗತಿಯಲ್ಲಿ, ಮಕ್ಕಳು ಹಾಗೂ ಶಿಕ್ಷಕರು ಆಟಗಳಿಂದಾಗುವ ಅನುಕೂಲಗಳ ಬಗ್ಗೆ ಚರ್ಚಿಸುವರು. |

<table>
<tr><td></td><td></td><td></td><td>ii) ಮಿಂಚುಪಟ್ಟಿಗಳ ಪ್ರದರ್ಶನ</td><td>→ ಆಟಗಳಪ್ರಯೋಜನಗಳಿಗೆ ಸಂಬಂಧಪಟ್ಟ ಮಿಂಚುಪಟ್ಟಿಗಳಲ್ಲಿರುವ ವಾಕ್ಯಗಳನ್ನು ಓದುತ್ತಾ ಆಟಗಳ ಪ್ರಾಮುಖ್ಯತೆಯನ್ನು ಅರಿಯುವರು.</td></tr>
<tr><td rowspan="6">3</td><td rowspan="6">ಸಸ್ಯಗಳ ಭಾಗಗಳು ಮತ್ತು ವಿಧಗಳನ್ನು ಗುರುತಿಸುವರು ಹಾಗೂ ಸಸ್ಯಗಳ ಮೇಲಿನ ನಮ್ಮ ಅವಲಂಬನೆಯನ್ನು ವಿವರಿಸುವರು</td><td rowspan="2">ಅ) ಸಸ್ಯಗಳ ವಿಧಗಳು.</td><td>i) 'ನಮ್ಮ ಶಾಲೆಯ ಸುತ್ತ ಮುತ್ತ' ( ಸಸ್ಯಗಳ ವೀಕ್ಷಣೆ )</td><td>→ ಶಿಕ್ಷಕರು ಮತ್ತು ಮಕ್ಕಳು ಶಾಲಾ ಪರಿಸರದಲ್ಲಿ ಸಂಚರಿಸಿ, ವಿವಿಧ ರೀತಿಯ ಸಸ್ಯಗಳನ್ನು ವೀಕ್ಷಿಸಿ, ಅವುಗಳಲ್ಲಿ ಮೂಲಿಕೆಗಳು, ಪೊದರುಗಳು, ಬಳ್ಳಿಗಳು ಮತ್ತು ಮರಗಳನ್ನು ಪರಿಚಯಿಸಿಕೊಂಡು ಅವುಗಳನ್ನು ಹೆಸರಿಸುವರು.
<table>
<tr><td>ಕ್ರ.ಸಂ</td><td>ಮೂಲಿಕೆಗಳು</td><td>ಪೊದರುಗಳು</td><td>ಬಳ್ಳಿಗಳು</td><td>ಮರಗಳು</td></tr>
<tr><td></td><td></td><td></td><td></td><td></td></tr>
<tr><td></td><td></td><td></td><td></td><td></td></tr>
</table></td></tr>
<tr><td>ii)ವಿಡಿಯೋ ವೀಕ್ಷಣೆ</td><td>→ ಮಕ್ಕಳು, ವಿವಿಧರೀತಿಯಸಸ್ಯಗಳವಿಡಿಯೋವನ್ನು ವೀಕ್ಷಿಸಿ ಸಸ್ಯಗಳ ವಿಧಗಳನ್ನು ಗುರುತಿಸುವರು.<br>https://www.youtube.com/watch?v=u-dEaIVN_hc</td></tr>
<tr><td rowspan="2">ಆ) ಸಸ್ಯದ ಭಾಗಗಳು.</td><td>i) ಪ್ರಾತ್ಯಕ್ಷಿಕೆ</td><td>→ ಮಕ್ಕಳು, ನೈಜ ಸಸ್ಯಗಳನ್ನು ವೀಕ್ಷಿಸಿ, ಸಸ್ಯದ ಭಾಗಗಳನ್ನು ಗುರುತಿಸುವರು.</td></tr>
<tr><td>ii) 'ಬರೆವೆ ನಾನು ಚಿತ್ರ' (ಸಸ್ಯದ ಚಿತ್ರ ರಚನೆ )</td><td>→ ಮಕ್ಕಳು ಸಸ್ಯದ ಅಂದವಾದ ಚಿತ್ರವನ್ನು ಬಿಡಿಸಿ, ಭಾಗಗಳನ್ನು ಗುರುತಿಸಿ ಬಣ್ಣವನ್ನು ಹಚ್ಚಲು ಶಿಕ್ಷಕರು ಅನುಕೂಲಿಸುವುದು. ನಂತರ ಮಕ್ಕಳು ತರಗತಿಯಲ್ಲಿ ತಮ್ಮ ತಮ್ಮ ಚಿತ್ರಗಳನ್ನು ಪ್ರದರ್ಶಿಸಿ ಆನಂದಿಸುವರು.</td></tr>
<tr><td rowspan="2">ಇ) ದೈನಂದಿನ ಅವಶ್ಯಕತೆಗಳಿಗಾಗಿ ಸಸ್ಯಗಳ ಮೇಲೆ ಅವಲಂಬನೆ.</td><td>i)ಸಸ್ಯದಿಂದ ಆಹಾರ' ( ಗುಂಪು ಚಟುವಟಿಕೆ )</td><td>→ ಮಕ್ಕಳನ್ನು ಗುಂಪುಗಳಾಗಿ ಮಾಡಿ, ಪ್ರತಿನಿತ್ಯ ಸೇವಿಸುವ ಆಹಾರ ಪದಾರ್ಥಗಳಾದ ಧಾನ್ಯಗಳು, ಹಣ್ಣು, ತರಕಾರಿಗಳನ್ನು ಒದಗಿಸುವ ಸಸ್ಯಗಳನ್ನು ಪಟ್ಟಿಮಾಡಲು ಶಿಕ್ಷಕರು ಅನುಕೂಲಿಸಿ, ಸಸ್ಯಗಳ ಮೇಲೆ ನಮ್ಮ ಅವಲಂಬನೆಯನ್ನು ತಿಳಿಸುವರು.</td></tr>
<tr><td>ii) 'ಹಿತ್ತಲ ಗಿಡ ಮದ್ದು' ( ಪರಿಸರ ವೀಕ್ಷಣೆ )</td><td>→ ಶಿಕ್ಷಕರು, ಶಾಲೆಯ ಸುತ್ತಮುತ್ತ ಲಭ್ಯವಿರುವ ಔಷಧೀಯ ಸಸ್ಯಗಳನ್ನು ಮಕ್ಕಳು ವೀಕ್ಷಿಸಲು ಅನುಕೂಲಿಸಿ, ಅವುಗಳ ಉಪಯೋಗಗಳನ್ನು ತಿಳಿಸಿ, ಅವುಗಳನ್ನು ಶಾಲಾ ಕೈತೋಟದಲ್ಲಿ ಹಾಗೂ ಮನೆಯ ಹತ್ತಿರ ಬೆಳೆಸುವಂತೆ</td></tr>
</table>

<table>
<tr><td></td><td></td><td></td><td></td><td>ಪ್ರೇರೇಪಿಸುವುದು.</td></tr>
<tr><td rowspan="4">4</td><td rowspan="4">ವಿವಿಧ ಪ್ರಾಣಿಗಳನ್ನು ಮತ್ತು ಪಕ್ಷಿಗಳನ್ನು ಗುರುತಿಸಿ, ಪ್ರಾಣಿಗಳನ್ನು ವಾಸಸ್ಥಳದ ಆಧಾರದ ಮೇಲೆ ಹಾಗೂ ಪಕ್ಷಿಗಳನ್ನು ಅವು ಸೇವಿಸುವ ಆಹಾರಕ್ಕನುಗುಣವಾಗಿ ಗುಂಪು ಮಾಡುವರು</td><td rowspan="2">ಅ) ಸುತ್ತಮುತ್ತಲಿನ ಪ್ರಾಣಿಗಳನ್ನು ಗುರುತಿಸುವುದು.</td><td>i)ಪ್ರಾಣಿಗಳನ್ನು ಗುರುತಿಸೋಣ ಬನ್ನಿ’<br>( ಚಿತ್ರ ವೀಕ್ಷಣೆ )</td><td>→ ವಿವಿಧ ಪ್ರಾಣಿಗಳ ಚಿತ್ರಗಳನ್ನು ಮಕ್ಕಳು ವೀಕ್ಷಿಸಿ, ಅವುಗಳನ್ನು ಗುರುತಿಸಿ ಹೆಸರಿಸುವರು ಹಾಗೂ ತಮ್ಮ ಊರಿನಲ್ಲಿರುವ ಮತ್ತು ತಾವು ನೋಡಿರುವ ಪ್ರಾಣಿಗಳ ಹೆಸರುಗಳನ್ನು ಪಟ್ಟಿ ಮಾಡಿ ಚಿತ್ರ ಅಂಟಿಸುವರು.
<table>
<tr><th>ಕ್ರ.ಸಂ</th><th>ಪ್ರಾಣಿಗಳ ಹೆಸರು</th><th>ಚಿತ್ರ ಅಂಟಿಸು</th></tr>
<tr><td>1</td><td>ಹಸು</td><td></td></tr>
<tr><td>2</td><td>ನರಿ</td><td></td></tr>
<tr><td>3</td><td>ಎಮ್ಮೆ</td><td></td></tr>
</table></td></tr>
<tr><td>ii) ’ಪ್ರಾಣಿಗಳ ಕೂಗು’<br>( ಆಡಿಯೋ ಆಲಿಸುವಿಕೆ )</td><td>→ ಶಿಕ್ಷಕರು ಕೇಳಿಸುತ್ತಿರುವ ವಿವಿಧ ಪ್ರಾಣಿಗಳ ಕೂಗುಗಳ (ಧ್ವನಿ) ಆಡಿಯೋವನ್ನು ಮಕ್ಕಳು ಆಲಿಸಿ<br>ಆ ಪ್ರಾಣಿಗಳನ್ನು ಗುರುತಿಸುವರು.</td></tr>
<tr><td rowspan="2">ಆ) ಪ್ರಾಣಿಗಳನ್ನು ಅವುಗಳ ವಾಸಸ್ಥಳದ ಆಧಾರದ ಮೇಲೆ ವರ್ಗೀಕರಣ.</td><td>i) ಪ್ರಾಣಿಗಳ ವಾಸಸ್ಥಳಗಳಿರುವ ಚಿತ್ರಪಟಗಳ ಪ್ರದರ್ಶನ.</td><td>→ ಶಿಕ್ಷಕರು ಪ್ರದರ್ಶಿಸುವ ವಿವಿಧ ಪ್ರಾಣಿಗಳ ವಾಸಸ್ಥಳಗಳಿರುವ ಚಿತ್ರಗಳನ್ನು ಮಕ್ಕಳು ಗುರುತಿಸುವರು. ಈ ಕೆಳಗಿನಂತೆ ಪಟ್ಟಿ ಮಾಡುವರು
<table>
<tr><th>ಕ್ರ.ಸಂ</th><th>ಪ್ರಾಣಿಗಳ ಹೆಸರು</th><th>ವಾಸಸ್ಥಳ</th></tr>
<tr><td></td><td></td><td></td></tr>
</table></td></tr>
<tr><td>ii) ಪ್ರಾಣಿಗಳ ವರ್ಗೀಕರಣ ಮಾಡೋಣವೇ..!<br>(ಗುಂಪು ಚಟುವಟಿಕೆ)</td><td>→ ಶಿಕ್ಷಕರು,ಪ್ರತಿಯೊಂದು ಮಗುವಿಗೂ ಪ್ರಾಣಿಗಳ ಚಿತ್ರಗಳಿರುವ ಮಿಂಚುಪಟ್ಟಿಗಳನ್ನು ನೀಡಿ, ನೆಲವಾಸಿ, ಜಲವಾಸಿ ಮತ್ತು ಹಿಮವಾಸಿಗಳಾಗಿ ಗುಂಪು ಮಾಡಲು ಅನುಕೂಲಿಸುವುದು.</td></tr>
</table>

| | | | | |
|---|---|---|---|---|
| | | ಇ) ವಿವಿಧ ಪಕ್ಷಿಗಳನ್ನು ಗುರುತಿಸಿ, ಅವುಗಳ ವರ್ಗೀಕರಣ. | i) ಪಕ್ಷಿ ವೀಕ್ಷಣೆ | → ಮಕ್ಕಳು ಶಾಲೆ ಮತ್ತು ಮನೆಯ ಪರಿಸರದಲ್ಲಿರುವ ಪಕ್ಷಿಗಳನ್ನು ವೀಕ್ಷಿಸಿ, ಹೆಸರಿಸುವರು. |
| | | | ii) ಪಕ್ಷಿಗಳ ಆಹಾರವನ್ನು ಬಲ್ಲೆಯಾ! ( ವಿಡಿಯೋ ವೀಕ್ಷಣೆ) | → ಶಿಕ್ಷಕರು ಪ್ರದರ್ಶಿಸುತ್ತಿರುವ ವಿವಿಧ ಪಕ್ಷಿಗಳ ಆಹಾರಕ್ಕೆ ಸಂಬಂಧಪಟ್ಟ ವಿಡಿಯೋವನ್ನು ಮಕ್ಕಳು ವೀಕ್ಷಿಸಿ, ಸಸ್ಯಾಹಾರಿ, ಮಿಶ್ರಾಹಾರಿ ಪಕ್ಷಿಗಳಾಗಿ ವರ್ಗೀಕರಿಸುವರು. |
| 5 | ದಿಕ್ಕುಗಳು ಮತ್ತು ದಿಕ್ಕುಗಳಿಗನುಗುಣವಾಗಿ ಸ್ಥಳಗಳನ್ನು ಗುರುತಿಸುವರು. | ಅ) ದಿಕ್ಕುಗಳನ್ನು ಗುರುತಿಸುವರು. | i) ಆಕಾಶ ವೀಕ್ಷಣೆ | → ಮಕ್ಕಳಿಗೆ ಸೂರ್ಯ ಹುಟ್ಟುವ ದಿಕ್ಕನ್ನು ತೋರಿಸಿ, ದಿಕ್ಕುಗಳನ್ನು ಪರಿಚಯಿಸೋಣ. ವಿವಿದ ದಿಕ್ಕುಗಳಿಗೆ ತಿರುಗುವ ಆಟ ಆಡಿಸೋಣ. |
| | | | ii) ನಿಯೋಜಿತ ಚಟುವಟಿಕೆ | → ಊರಿನ ಬೇರೆ ಬೇರೆ ಸ್ಥಳಗಳಲ್ಲಿ ನಿಂತು ದಿಕ್ಕುಗಳನ್ನು ಗುರುತಿಸಲು ಸೂಚಿಸಿ. |
| | | ಆ) ವಿವಿಧ ದಿಕ್ಕುಗಳಿಗನುಗುಣವಾಗಿ ಸ್ಥಳಗಳನ್ನು ಗುರುತಿಸುವರು. | i) 'ದಿಕ್ಕುಗಳನ್ನು ಗುರುತಿಸೋಣ' | → ಶಿಕ್ಷಕರ ಸೂಚನೆಯಂತೆ ಶಾಲೆಯನ್ನು ಕೇಂದ್ರವಾಗಿಟ್ಟುಕೊಂಡು ಊರಿನ ಪ್ರಮುಖ ಕಟ್ಟಡ ಅಥವಾ ಸ್ಥಳಗಳು ಇರುವ ದಿಕ್ಕನ್ನು ಗುರುತಿಸುವರು. (ಉದಾ: ಶಾಲೆಯಿಂದ ಆರೋಗ್ಯ ಕೇಂದ್ರವು ಯಾವ ದಿಕ್ಕಿನಲ್ಲಿದೆ?) |
| | | | ii) 'ದಿಕ್ಕು' ಮೌಖಿಕ ಚಟುವಟಿಕೆ | → ಮಕ್ಕಳು ತಮ್ಮ ಊರನ್ನು ಕೇಂದ್ರವಾಗಿರಿಸಿಕೊಂಡು ವಿವಿಧ ದಿಕ್ಕುಗಳಲ್ಲಿರುವ ಬೇರೆ ಬೇರೆ ಊರುಗಳನ್ನು ಹೆಸರಿಸುವರು. |
| 6 | ವಿವಿಧ ಆಕಾಶ ಕಾಯಗಳನ್ನು ಗುರುತಿಸುವರು ಹಾಗೂ | ಅ) ಆಕಾಶಕಾಯಗಳನ್ನು ಗುರುತಿಸುವರು | i) ಆಕಾಶ ವೀಕ್ಷಣೆ | → ಹಗಲು ಮತ್ತು ರಾತ್ರಿ ಆಕಾಶವನ್ನು ವೀಕ್ಷಿಸಿ ಸೂರ್ಯ, ಚಂದ್ರ ಹಾಗೂ ನಕ್ಷತ್ರಗಳನ್ನು ಗುರುತಿಸುವರು. |
| | | | ii) ಚಿತ್ರಕಲೆ | → ಸೂರ್ಯ, ಚಂದ್ರ, ನಕ್ಷತ್ರಗಳ ಚಿತ್ರ ಬರೆದು ಬಣ್ಣ ಹಚ್ಚಿ, ತರಗತಿಯಲ್ಲಿ ಪ್ರದರ್ಶಿಸಿ ಸಂಭ್ರಮಿಸುವರು. |
| | | | iii) ಮಾಹಿತಿ | → ಹಿರಿಯರಿಂದ ನಕ್ಷತ್ರಗಳ ಬಗ್ಗೆ ಹೆಚ್ಚಿನ ಮಾಹಿತಿ ಸಂಗ್ರಹಿಸಲು |

| | | | | |
|---|---|---|---|---|
| | ಭೂಮಿಯ ಲಕ್ಷಣಗಳ ಬಗ್ಗೆ ಅರಿಯುವರು | | ಸಂಗ್ರಹಣೆ | ತಿಳಿಸುವುದು |
| | | ) ಭೂಮಿಯ ಗುಣಲಕ್ಷಣಗಳು. | i) 'ನಮ್ಮ ಭೂಮಿ' (ಪ್ರಾತ್ಯಕ್ಷಿಕೆ) | → ಮಕ್ಕಳು, ಭೂಮಿಯ ಮಾದರಿ ( ಗ್ಲೋಬ್ ) ಯನ್ನು ವೀಕ್ಷಿಸಿ, ಭೂಭಾಗ ಮತ್ತು ಜಲಭಾಗವನ್ನು ಗುರುತಿಸಿ, ಶಿಕ್ಷಕರ ಸಹಾಯದಿಂದ ಭೂಮಿಯ ಲಕ್ಷಣಗಳನ್ನು ತಿಳಿಯುವರು. ( ಉದಾ: ಭೂಮಿ ಒಂದು ಗ್ರಹ, ಚಂದ್ರ ಭೂಮಿಯ ಉಪಗ್ರಹ, ಜಲಭಾಗ, ಭೂಭಾಗ ) |
| | | | ii) ಪ್ರಾತ್ಯಕ್ಷಿಕೆ | → ಗ್ಲೋಬ್‌ನಲ್ಲಿ ಅಕ್ಷಾಂಶ ಮತ್ತು ರೇಖಾಂಶಗಳನ್ನು ಮಕ್ಕಳು ಗುರುತಿಸಲು ಶಿಕ್ಷಕರು ಅನುಕೂಲಿಸುವರು. |
| 7 | ನೀರಿನ ಮೂಲಗಳು, ಉಪಯೋಗಗಳು ಹಾಗೂ ನೀರಿನ ಸಂರಕ್ಷಣೆಯ ಕ್ರಮಗಳ ಬಗ್ಗೆ ತಿಳಿಯುವರು | ಅ) ನೀರಿನ ಮೂಲಗಳು. | i) 'ನೀರಿನ ಮೂಲಗಳು' (ಗುಂಪು ಚಟುವಟಿಕೆ) | → ಮಕ್ಕಳು ಗುಂಪುಗಳಲ್ಲಿ ಚರ್ಚಿಸಿ, ನೀರಿನ ಮೂಲಗಳನ್ನು ಪಟ್ಟಿ ಮಾಡುವರು. |
| | | | ii) ನಿಯೋಜಿತ ಕಾರ್ಯ | → ನೀರಿನ ಮೂಲಗಳ ಚಿತ್ರಗಳನ್ನು ಸಂಗ್ರಹಿಸಲು ತಿಳಿಸುವುದು |
| | | ಆ) ನೀರಿನ ಉಪಯೋಗಗಳು. | i) 'ನೀರು ಬೇಕು ನೀರು' (ಚರ್ಚೆ) | → ದಿನನಿತ್ಯದ ಕಾರ್ಯಗಳಲ್ಲಿ ನೀರನ್ನು ಬಳಸುವ ವಿವಿಧ ಸನ್ನಿವೇಶಗಳ ಬಗ್ಗೆ ಮಕ್ಕಳು ಹಾಗೂ ಶಿಕ್ಷಕರು ಚರ್ಚಿಸಿ ನೀರಿನ ಪ್ರಾಮುಖ್ಯತೆಯನ್ನು ಮನಗಾಣುವರು. |
| | | | ii) ಗೋಡೆ ಪತ್ರಿಕೆ ತಯಾರಿಸುವುದು | → ಮಕ್ಕಳು ನೀರಿನ ಉಪಯೋಗಗಳ ಬಗ್ಗೆ ಗೋಡೆ ಪತ್ರಿಕೆ ತಯಾರಿಸಿ ತರಗತಿಯಲ್ಲಿ ಪ್ರದರ್ಶಿಸಲಿ. |
| | | ಇ) ನೀರು ಪೋಲಾಗುವುದನ್ನು ತಡೆಯಲು | i) ಚಿತ್ರಪಟ / ವಿಡಿಯೋ ಪ್ರದರ್ಶನ | → ಮಕ್ಕಳು, ನೀರು ಪೋಲಾಗುತ್ತಿರುವ ಚಿತ್ರಪಟ / ವಿಡಿಯೋ ವೀಕ್ಷಸಿ, ಆ ಸನ್ನಿವೇಶಗಳನ್ನು ಪಟ್ಟಿ ಮಾಡುವರು. |

<table>
<tr><td></td><td></td><td>ಅನುಸರಿಸ ಬಹುದಾದ ಕ್ರಮಗಳು.</td><td>ii) ಹಾಡು / ಪಾತ್ರಾಭಿನಯ / ನಾಟಕ ಪ್ರದರ್ಶನ</td><td>→ ನೀರು ಪೋಲಾಗುವುದನ್ನು ತಡೆಯಲು ಜಾಗೃತಿ ಮೂಡಿಸುವ ಬಗ್ಗೆ ಸೂಕ್ತ ಹಾಡು / ನಾಟಕ / ಪಾತ್ರಾಭಿನಯ ಮಾಡಿಸುವುದು.</td></tr>
<tr><td rowspan="4">8</td><td rowspan="4">ಸಸ್ಯಮೂಲ ಮತ್ತು ಪ್ರಾಣಿಮೂಲ ಆಹಾರ ಪದಾರ್ಥಗಳನ್ನು ಗುರುತಿಸುವರು ಹಾಗೂ ಆಹಾರ ತಯಾರಿಕೆಗೆ ಬೇಕಾಗುವ ಪದಾರ್ಥಗಳನ್ನು ತಿಳಿಯುವರು ಮತ್ತು ವಿವಿಧ ಪ್ರಾಣಿಪಕ್ಷಿಗಳ ಆಹಾರವನ್ನು</td><td rowspan="2">ಅ) ಸಸ್ಯಮೂಲ ಮತ್ತು ಪ್ರಾಣಿಮೂಲ ಆಹಾರ ಪದಾರ್ಥಗಳನ್ನು ವರ್ಗೀಕರಣ.</td><td>i) 'ಆಹಾರ – ಇದು ಎಲ್ಲಿಂದ ದೊರಕುತ್ತದೆ?' (ಗುಂಪು ಚಟುವಟಿಕೆ)</td><td>→ ವಿವಿಧ ಆಹಾರದ ಚಿತ್ರಗಳ ಮಿಂಚುಪಟ್ಟಿಗಳನ್ನು ಮಕ್ಕಳ ಗುಂಪುಗಳಿಗೆ ನೀಡಿ, ಸಸ್ಯಮೂಲ ಮತ್ತು ಪ್ರಾಣಿಮೂಲ ಆಹಾರದ ಗುಂಪುಗಳಾಗಿ ವಿಂಗಡಿಸಲು ಸೂಚಿಸುವುದು.</td></tr>
<tr><td>ii) ಚಾರ್ಟ್ ತಯಾರಿಕೆ</td><td>→ಮಕ್ಕಳು ಸಂಗ್ರಹಿಸಿ ತಂದಿರುವ ಆಹಾರದ ಚಿತ್ರಗಳನ್ನು ಕೆಳಗೆ ನೀಡಿರುವ ಚಾರ್ಟ್‌ನಲ್ಲಿ ಅಂಟಿಸುವರು.<table><tr><th>ಸಸ್ಯಮೂಲ</th><th>ಪ್ರಾಣಿಮೂಲ</th></tr><tr><td></td><td></td></tr></table></td></tr>
<tr><td rowspan="2">ಆ) ವಿವಿಧ ಆಹಾರವನ್ನು ತಯಾರಿಸಲು ಬಳಸಿರುವ ಆಹಾರ ಪದಾರ್ಥಗಳು.</td><td>i) 'ಸವಿ ರುಚಿ' (ಗುಂಪು ಚಟುವಟಿಕೆ)</td><td>→ ತರಗತಿಯ ಮಕ್ಕಳನ್ನು 4-5 ಗುಂಪುಗಳಾಗಿ ಮಾಡಿ, ತಮ್ಮ ಮನೆಯಲ್ಲಿ ತಯಾರಿಸುವ ಕೆಲವು ಆಹಾರ (ಅಡುಗೆ) ಗಳ ಪಟ್ಟಿ ಮಾಡಿ, ಅವುಗಳನ್ನು ತಯಾರಿಸಲು ಬಳಸುವ ಪದಾರ್ಥಗಳನ್ನು ಬರೆಯುವಂತೆ ತಿಳಿಸುವುದು.<br>ಉದಾ: ಚಪಾತಿ - ಗೋಧಿ, ಮುದ್ದೆ – ರಾಗಿ</td></tr>
<tr><td>ii) 'ಹಬ್ಬದೂಟ' (ನಿಯೋಜಿತ ಚಟುವಟಿಕೆ)</td><td>→ ಮಕ್ಕಳು, ತಮ್ಮ ಮನೆಯಲ್ಲಿ ಆಚರಿಸಿದ ಯಾವುದಾದರೊಂದು ಹಬ್ಬದ ದಿನ ತಯಾರಿಸಿದ ವಿವಿಧ ಬಗೆಯ ಅಡುಗೆಗಳು ಹಾಗೂ ಅವುಗಳನ್ನು ತಯಾರಿಸಲು ಬಳಸಿದ ಆಹಾರ ಪದಾರ್ಥಗಳನ್ನು ಪಟ್ಟಿ ಮಾಡಿಕೊಂಡು ಬಂದು ತರಗತಿಯಲ್ಲಿ ಹಂಚಿಕೊಳ್ಳುವರು.</td></tr>
</table>

| | | | | |
|---|---|---|---|---|
| | ತಿಳಿಯುವರು | ಇ) ವಿವಿಧ ಪ್ರಾಣಿ / ಪಕ್ಷಿಗಳು ಸೇವಿಸುವ ಆಹಾರ. | i) 'ಆಹಾರದ ವೈವಿಧ್ಯತೆ' (ಲಿಖಿತ ಚಟುವಟಿಕೆ) | → ಶಿಕ್ಷಕರು, ಮಕ್ಕಳಿಂದ ತಾವು ನೋಡಿರುವ ಪ್ರಾಣಿ / ಪಕ್ಷಿಗಳು ಸೇವಿಸುವ<br>ಆಹಾರ ಪದಾರ್ಥಗಳನ್ನು ಪಟ್ಟಿ ಮಾಡಿಸಿ, ವಿವಿದ ಪ್ರಾಣಿ / ಪಕ್ಷಿಗಳು ಸೇವಿಸುವ ಆಹಾರದಲ್ಲಿನ ವೈವಿಧ್ಯತೆಯನ್ನು ಅರಿಯಲು ಅನುಕೂಲಿಸಿ. |
| 9 | ಮಾನವನ ಮೂಲಭೂತ ಅಗತ್ಯತೆಗಳ ಅವಶ್ಯಕತೆ ಹಾಗೂ ಕಾಲಕ್ಕನು ಗುಣವಾಗಿ ಅವುಗಳಲ್ಲಾದ ಬದಲಾವಣೆಗಳನ್ನು ವಿವರಿಸುವರು | ಅ) ಮೂಲಭೂತ ಅಗತ್ಯಗಳಾದ ಆಹಾರ, ಉಡುಪು, ವಸತಿಯ ಅವಶ್ಯಕತೆ. | i) ವಸತಿ, ಆಹಾರ ಮತ್ತು ಉಡುಪುಗಳಿಗೆ ಸಂಬಂಧಿಸಿದ ಪ್ರಶ್ನಾವಳಿ ಕಾರ್ಡ್ಗಳು | → ಪ್ರತಿಯೊಂದು ಮಗುವಿಗೂ ಪ್ರಶ್ನೆಗಳಿರುವ ಕಾರ್ಡ್ ನೀಡಿ, ಆ ಪ್ರಶ್ನೆಗಳನ್ನು ಓದಿಸಿ ಉತ್ತರ ಹೇಳಿಸುವುದು.<br>ಉದಾ: ನಮಗೆ ಬಟ್ಟೆ ಏಕೆ ಬೇಕು?<br>ನಮಗೆ ಮನೆ ಏಕೆ ಬೇಕು ? ಕಾರ್ಯ ಕಾರಣ ಸಂಬಂಧಗಳನ್ನು ತಿಳಿಸಿ. |
| | | | ii) ಗುಂಪು ಚಟುವಟಿಕೆ | → ವಿವಿಧ ಚಿತ್ರಗಳಿರುವ ಅಭ್ಯಾಸ ಹಾಳೆಗಳನ್ನುಮಕ್ಕಳಿಗೆ ನೀಡಿ, ಅದರಲ್ಲಿ ನಮ್ಮ ಮೂಲಭೂತ ಅವಶ್ಯಕತೆಗಳಿಗೆ ಸಂಬಂಧಿಸಿದ ಚಿತ್ರಗಳಿಗೆ ✓ ಗುರುತು ಹಾಕವಂತೆ<br>ತಿಳಿಸುವುದು.(ಉದಾ:ಉಡುಪು, ಟಿ.ವಿ, ಮಂಚ, ಮನೆ) |
| | | ಆ) ಮಾನವನ ಉಡುಪು ಮತ್ತು ವಸತಿಯ ಅಗತ್ಯತೆಗಳಲ್ಲಾದ ಬದಲಾವಣೆ. | i) 'ವಸತಿ' (ಚಿತ್ರಪಟ ಪ್ರದರ್ಶನ) | → ಮಾನವನ ಅಂದಿನ ವಸತಿ ( ಗುಹೆ, ಮರದ ಪೊಟರೆ ) ಮತ್ತು ಇಂದಿನ ವಸತಿಗಳ ಚಿತ್ರಗಳಿರುವ ಚಿತ್ರಪಟಗಳನ್ನು ವೀಕ್ಷಿಸಿ ಹೋಲಿಸುವರು. |
| | | | ii) 'ಉಡುಪು' (ವಿಡಿಯೋ ವೀಕ್ಷಣೆ) | → ಹಿಂದಿನ ಕಾಲದಲ್ಲಿ ಮಾನವರು ಧರಿಸುತ್ತಿದ್ದ ಉಡುಪುಗಳಿಗೆ ಸಂಬಂಧಿಸಿದ ವಿಡಿಯೋ ವೀಕ್ಷಿಸಿ, ಉಡುಪುಗಳನ್ನು ಧರಿಸುವುದರಲ್ಲಾಗಿರುವ ಬದಲಾವಣೆಯ ಬಗ್ಗೆ ತಿಳಿಯುವರು. |

| | | | | |
|---|---|---|---|---|
| | | ಇ) ಮಾನವನ ಮುಖ್ಯ ಅವಶ್ಯಕತೆಗಳಲ್ಲೊಂದಾದ ಆಹಾರ, ಆಹಾರ ಪದ್ಧತಿಯಲ್ಲಾದ ಬದಲಾವಣೆ, ಸಂಗ್ರಹಣಾ ವಿಧಾನಗಳು. | i) 'ಆಹಾರ ಪದ್ಧತಿಯಲ್ಲಿ ಬದಲಾವಣೆ' (ಚಿತ್ರಪಟ / ವಿಡಿಯೋ ವೀಕ್ಷಣೆ) | → ಆದಿಮಾನವರ ಆಹಾರ ಪದ್ಧತಿಗೆ ಸಂಬಂಧಪಟ್ಟ ಚಿತ್ರಪಟ / ವಿಡಿಯೋ ವೀಕ್ಷಿಸಿ, ಹಿಂದಿನ ಆಹಾರ ಪದ್ಧತಿಯಿಂದ ಇಂದಿನ ಆಹಾರ ಪದ್ಧತಿಗೆ ಆಗಿರುವ ಬದಲಾವಣೆಯ ಬಗ್ಗೆ ತಿಳಿಯುವರು. ಅಂದು ಮತ್ತು ಇಂದು ಸೇವಿಸುತ್ತಿರುವ ಆಹಾರ ಪದಾರ್ಥಗಳನ್ನು ಪಟ್ಟಿ ಮಾಡುವರು. |
| | | | iii) ಚಿತ್ರ ಬಿಡಿಸುವುದು | → ಮಕ್ಕಳು, ಧಾನ್ಯ ಸಂಗ್ರಹಿಸುವ ಯಾವುದಾದರೊಂದು ಪರಿಕರದ ಚಿತ್ರ ಬಿಡಿಸಿ, ಬಣ್ಣ ಹಚ್ಚಿ ಆನಂದಿಸುವರು. |
| 10 | ವಿವಿಧ ಸಾರಿಗೆ ವಾಹನಗಳನ್ನು ಗುರುತಿಸಿ ಗುಂಪು ಮಾಡುವರು ಹಾಗೂ ಸಂಪರ್ಕ ಸಾಧನಗಳ ಅಗತ್ಯತೆ ಮತ್ತು ಕಾಲಕ್ಕನುಗುಣವಾಗಿ ಅವುಗಳಲ್ಲಾದ ಬದಲಾವಣೆಗಳನ್ನು | ಅ) ವಿವಿಧ ಬಗೆಯ ವಾಹನಗಳನ್ನು ಗುರುತಿಸಿ ಹೆಸರಿಸುವರು ಹಾಗೂ ಸಾರಿಗೆ ವಾಹನಗಳ ವರ್ಗೀಕರಣ | i) 'ವಾಹನಗಳು' (ಚಿತ್ರಪಟ ಪ್ರದರ್ಶನ) | → ಮಕ್ಕಳಿಗೆ, ವಿವಿಧ ಬಗೆಯ ಚಿತ್ರಗಳಿರುವ ಚಿತ್ರಪಟವನ್ನು ನೀಡಿ ಅವುಗಳನ್ನು ಗುರುತಿಸಿ ಹೆಸರಿಸಲು ಅನುಕೂಲಿಸುವುದು.    |
| | | | ii) ವಾಹನಗಳ ಚಿತ್ರವೀಕ್ಷಣೆ ಮತ್ತು ವರ್ಗೀಕರಣ | → ಮಕ್ಕಳು, ಶಿಕ್ಷಕರು ನೀಡಿರುವ ವಿವಿಧ ವಾಹನಗಳ ಪ್ರತ್ಯೇಕ ಚಿತ್ರಗಳನ್ನು ಭೂಸಾರಿಗೆ, ಜಲಸಾರಿಗೆ ಹಾಗೂ ವಾಯುಸಾರಿಗೆ ವಾಹನಗಳಾಗಿ ವಿಂಗಡಿಸುವರು. |
| | | | | |

| | | | | |
|---|---|---|---|---|
| | ಅರಿಯುವರು | ಆ) ಸಂಪರ್ಕ ಸಾಧನಗಳು ಮತ್ತು ಅವುಗಳ ಅಗತ್ಯತೆ. | i) ಗುಂಪು ಚಟುವಟಿಕೆ | → ಸಾಧ್ಯವಿರುವ ಪ್ರಮುಖ ಸಂಪರ್ಕ ಸಾಧನಗಳನ್ನು ಮಕ್ಕಳಿಗೆ ತೋರಿಸಿ, ಅವುಗಳನ್ನು ಪರಿಚಯಿಸಿ, ಹೆಸರಿಸಲು ಸಹಕರಿಸುವುದು. |
| | | | ii) ಕ್ಷೇತ್ರಭೇಟಿ | → ಮಕ್ಕಳನ್ನು ಹತ್ತಿರದ ಅಂಚೆ ಕಛೇರಿಗೆ ಕರೆದುಕೊಂಡು ಹೋಗಿ ಅಲ್ಲಿನ ಕಾರ್ಯ ವೈಖರಿ ಹಾಗೂ ಅಗತ್ಯತೆಯನ್ನು ತಿಳಿಯಲು ಸಹಕರಿಸುವುದು. |
| | | ಇ) ಹಿಂದಿನ ಸಂಪರ್ಕ ಸಾಧನಗಳಿಂದ ಇಂದಿನ ಸಂಪರ್ಕ ಸಾಧನಗಳವರೆಗೂ ಆಗಿರುವ ಬದಲಾವಣೆಗಳು | i) ವಿಡಿಯೋ ಪ್ರದರ್ಶನ | → ಹಿಂದಿನ ಹಾಗೂ ಇಂದಿನ ಸಂಪರ್ಕ ಸಾಧನಗಳ ವಿಡಿಯೋ ಪ್ರದರ್ಶಿಸಿ ಅವುಗಳನ್ನು ಪಟ್ಟಿ ಮಾಡಿಸುವುದು. |
| | | | ii) 'ನನ್ನ ನೆಚ್ಚಿನ ಸಂಪರ್ಕ ಸಾಧನ' (ಮೌಖಿಕ ಅಭಿವ್ಯಕ್ತಿ) | → ತರಗತಿಯ ಪ್ರತಿಯೊಂದು ಮಗುವು ಯಾವುದಾದರೊಂದು ಸಂಪರ್ಕ ಸಾಧನದ ಉಪಯೋಗಗಳನ್ನು ಹೇಳುವುದು. |
| 11 | ವೈಯಕ್ತಿಕ ಹಾಗೂ ಪರಿಸರ ಸ್ವಚ್ಛತೆ ಬಗ್ಗೆ ಜಾಗೃತಿ ಹೊಂದುವರು ಹಾಗೂ ಕಸದ ಪುನರ್ಬಳಕೆಯ ಬಗ್ಗೆ ತಿಳಿಯುವರು | ಅ) ದೈಹಿಕ ಸ್ವಚತೆ. | i) 'ಸ್ವಚ್ಛತೆ' (ಪ್ರಶ್ನಾವಳಿ ಕಾರ್ಡ್) | → ಸ್ವಚ್ಛತೆಯ ಬಗ್ಗೆ ಪ್ರಶ್ನೆಗಳಿರುವ ಕಾರ್ಡ್‌ಗಳನ್ನು ಮಕ್ಕಳಿಗೆ ನೀಡಿ ಉತ್ತರಗಳನ್ನು ಹೇಳಿಸಿ, ಸ್ವಚ್ಛತೆಯ ಬಗ್ಗೆ ಜಾಗೃತಿ ಮೂಡಿಸುವುದು.<br>( ಉದಾ: ಪ್ರತಿದಿನ ಏಕೆ ಸ್ನಾನ ಮಾಡಬೇಕು ? ) |
| | | | ii) ಚಿತ್ರ ಪ್ರದರ್ಶನ ಹಾಗೂ ಚರ್ಚೆ | → ತರಗತಿಯ ಮಕ್ಕಳನ್ನು ಐದು ಗುಂಪುಗಳಾಗಿ ಮಾಡಿ, ಪ್ರತಿಯೊಂದು ಗುಂಪಿಗೂ ಒಂದೊಂದು ಜ್ಞಾನೇಂದ್ರಿಯದ ಚಿತ್ರಪಟ ನೀಡಿ ಅವುಗಳ ಸ್ವಚ್ಛತೆ ಹೇಗೆ? ಎಂಬುದನ್ನು ಕೇಳಿ, ಇನ್ನೂ ಹೆಚ್ಚಿನ ವಿಷಯವನ್ನು ಮಕ್ಕಳಿಗೆ ತಿಳಿಸುವುದು. |
| | | ಆ) ನಮ್ಮ ಸುತ್ತಮುತ್ತಲಿನ ವಿವಿಧ ರೀತಿಯ | i) 'ಕಸದ ವಿಂಗಡಣೆ' (ಪ್ರಾತ್ಯಕ್ಷಿಕೆ) | → ಶಾಲೆಯಲ್ಲಿ ಸಂಗ್ರಹಿಸಿದ ಕಸವನ್ನು ಕೊಳೆಯುವ ಕಸ, ಪುನರ್ಬಳಕೆಯ ಕಸ ಹಾಗೂ ಅಪಾಯಕಾರಿ ಕಸಗಳಾಗಿ ವಿಂಗಡಿಸಿ ತೋರಿಸುವುದು. |

| | | | | |
|---|---|---|---|---|
| | | ಕಸಗಳ ವಿಂಗಡಣೆ. | ii) ’ಕಸದ ವಿಲೇವಾರಿ ಕುರಿತು ಕಿರುಚಿತ್ರ ಪ್ರದರ್ಶನ, | → ಮಹಾನಗರ ಪಾಲಿಕೆ/ನಗರಸಭೆ/ಪುರಸಭೆಗಳಲ್ಲಿ ಕಸದ ಸಂಗ್ರಹಣೆ ಮತ್ತು ಕಸದ ವಿಲೇವಾರಿ ಬಗೆಗಿನ ಕಿರುಚಿತ್ರವನ್ನು ತೋರಿಸುವುದು ಹಾಗೂ ಕಸದ ವಿಲೇವಾರಿ ಬಗ್ಗೆ ತಿಳಿಸುವುದು. ಮಕ್ಕಳು ತಮ್ಮ ಮನೆಯಲ್ಲಿ ಯಾವ ರೀತಿ ಕಸವನ್ನು ವಿಲೇವಾರಿ ಮಾಡುವರು ಎಂಬುದರ ಬಗ್ಗೆ ಚರ್ಚಿಸುವುದು. |
| | | ಇ) ಪುನರ್ಬಳಕೆಗೆ ಯೋಗ್ಯವಾದ ಕಸದ ಬಗ್ಗೆ ಚರ್ಚೆ. | i) ‘Refuse, Reuse, Recycle (3 R’s) (ಗುಂಪು ಚಟುವಟಿಕೆ) | → ಮಕ್ಕಳು ಪುನರ್ಬಳಕೆಗೆ ಯೋಗ್ಯವಾದ ಕಸಗಳನ್ನು ಪಟ್ಟಿ ಮಾಡಿ, ಪುನರ್ಬಳಕೆ ವಿಧಾನವನ್ನು ಸಹಪಾಠಿಗಳೊಂದಿಗೆ ಚರ್ಚಿಸಲು ಮಾರ್ಗದರ್ಶಿಸಿ.<br>( ಉದಾ: ಪ್ಲಾಸ್ಟಿಕ್ ವಸ್ತುಗಳು, ಕಾಗದದ ಚೂರುಗಳು ) |
| | | | ii) ಚರ್ಚೆ ಮತ್ತು ಕ್ರಾಫ್ಟ್ ತಯಾರಿಕೆ | → ಕಸದ ಪುನರ್ಬಳಕೆಯ ಬಗ್ಗೆ ಚರ್ಚಿಸಿ ಯಾವುದಾದರೊಂದು ಕಸವನ್ನು ಉಪಯೋಗಿಸಿ ಒಂದು ಕ್ರಾಫ್ಟ್ ತಯಾರಿಸಿ ಶಾಲೆಯಲ್ಲಿ ಪ್ರದರ್ಶಿಸಲು ವ್ಯವಸ್ಥೆಗೊಳಿಸಿ.<br>( ಉದಾ: ಪ್ಲಾಸ್ಟಿಕ್ ಬಾಟಲ್ ನಿಂದ ಹೂವಿನ ಕುಂಡ ಹಾಗೂ ಪೆನ್ ಸ್ಟಾಂಡ್ ಗಳನ್ನು ತಯಾರಿಸುವುದು ) |

## ಪೂರ್ವ ಪರೀಕ್ಷೆ ಪ್ರಶ್ನಾವಳಿ

**ತರಗತಿ : 4** **ವಿಷಯ: ಪರಿಸರ ವಿಜ್ಞಾನ**

1).ನಿನ್ನ ಮನೆಯಲ್ಲಿರುವ ಸದಸ್ಯರ ಸಂಖ್ಯೆ ಎಷ್ಟು ?

2) ಕ್ರಿಕೆಟ್, ಕಬಡ್ಡಿ, ಕೇರಂ, ಚೌಕಾಬಾರ, ಲಗೋರಿ ಇವುಗಳಲ್ಲಿ ಒಳಾಂಗಣ ಮತ್ತು ಹೊರಾಂಗಣ ಆಟಗಳಾಗಿ ವಿಂಗಡಿಸು

3) ಸಸ್ಯದ ಚಿತ್ರ ಬರೆದು ಭಾಗಗಳನ್ನು ಹೆಸರಿಸು .

4) ನೀನು ನೋಡಿರುವ ವಿವಿಧ ಪ್ರಾಣಿಗಳನ್ನು, ಪಕ್ಷಿಗಳನ್ನು ಹೆಸರಿಸು

5) ಸೂರ್ಯ ಉದಯಿಸುವ ದಿಕ್ಕು ಯಾವುದು ?

6) ನೀರಿನ ಮೂಲಗಳನ್ನು ಪಟ್ಟಿ ಮಾಡು.

7) ಸಸ್ಯಮೂಲ ಮತ್ತು ಪ್ರಾಣಿ ಮೂಲದಿಂದ ಸಿಗುವ ಆಹಾರವನ್ನು ಪಟ್ಟಿ ಮಾಡು.

8) ಯಾವುದಾದರೂ ನಾಲ್ಕು ಪ್ರಾಣಿಗಳನ್ನು ಹೆಸರಿಸಿ ಅವುಗಳು ಸೇವಿಸುವ ಆಹಾರವನ್ನು ಬರೆ.

9) ಮಾನವನು ಜೀವಿಸಲು ಬೇಕಾಗಿರುವ ಮೂಲಭೂತ ಅವಶ್ಯಕತೆಗಳನ್ನು ಬರೆ.

10) ವಿವಿಧ ರೀತಿಯ ಸಾರಿಗೆ ವಾಹನಗಳನ್ನು ಹೆಸರಿಸು.

# ಸಾಫಲ್ಯ ಪರೀಕ್ಷೆ ಪ್ರಶ್ನಾವಳಿ

**ತರಗತಿ : 4** **ವಿಷಯ: ಪರಿಸರ ವಿಜ್ಞಾನ**

1)ನಿನ್ನ ಮನೆಯಲ್ಲಿರುವ ಸದಸ್ಯರ ಹೆಸರಿನೊಂದಿಗೆ ನಿನ್ನ ಸಂಬಂಧವನ್ನು ಬರೆ.

2)ನಿನ್ನ ಶಾಲೆಯ ಮಧ್ಯಾಹ್ನದ ಅವಧಿಯಲ್ಲಿ ನೀನು ಹಾಡುವ ಆಟಗಳನ್ನು ಹೆಸರಿಸು.

3) ಆಟಗಳನ್ನು ಹಾಡುವುದರಿಂದ ನಮಗಾಗುವ ಉಪಯೋಗಗಳನ್ನು ತಿಳಿಸು.

4) ಸಸ್ಯಗಳಿಂದ ನಮಗಾಗುವ ಉಪಯೋಗಗಳನ್ನು ಬರೆ.

5)ಸೂರ್ಯನಿಗೆ ಎದುರಾಗಿ ನಿಂತಾಗ ನಿನ್ನ ಎಡಭಾಗದ ದಿಕ್ಕು ಯಾವುದು ?

6) ಭೂಮಿ, ಚಂದ್ರ ಚಿತ್ರ ಬರೆದು ಬಣ್ಣ ಹಚ್ಚು

7) ನೀರಿನ ಉಪಯೋಗಗಳನ್ನು ಬರೆ.

8) ಹಿಂದಿನ ಕಾಲದ ಮಾನವರು ವಾಸಿಸುತ್ತಿದ್ದ ವಾಸ ಸ್ಥಳಗಳನ್ನು ಬರೆ.

9) ಭೂಸಾರಿಗೆ, ವಾಯು ಸಾರಿಗೆ, ಜಲ ಸಾರಿಗೆಗೆ ಒಂದೊಂದು ಉದಾಹರಣೆ ಕೊಡಿ

10)ಕೊಳೆಯುವ ಕಸ ಮತ್ತು ಪುನರ್ ಬಳಕೆಯ ಕಸಕ್ಕೆ ಉದಾಹರಣೆ ಕೊಡಿ.

**ಆಕರ ಗ್ರಂಥಗಳು:-**

1. ಕರ್ನಾಟಕ ರಾಜ್ಯ ಶಾಲಾ ಪಠ್ಯ ಪುಸ್ತಕಗಳು

2.ಹಿಂದಿನ ವರ್ಷಗಳ ಸೇತುಬಂಧ ಸಾಹಿತ್ಯ

3.ಕಲಿಕಾ ಚೇತರಿಕೆ ಶಿಕ್ಷಕರ ಕೈಪಿಡಿ

4.ಕಲಿಕಾ ಚೇತರಿಕೆ ಕಲಿಕಾ ಹಾಳೆಗಳು

5.ಸಂವೇದ ತರಗತಿಯ ವಿಡಿಯೋ ಲಿಂಕ್ ಗಳು